ಕರ್ನಾಟಕ ವಿಧಾನಪ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1596
ಸದಸ್ಯರ ಹೆಸರು : ಶ್ರೀಮುನಿರಾಜುಗೌಡ ಪಿ.ಎಂ. (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದದಿನಾಂಕ : 11.03.2022

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಕಳೆದ ಎರಡು ವರ್ಷಗಳಿಂದ ರಾಜ್ಯ ತೋಟಗಾರಿಕೆ ಇಲಾಖೆ ವತಿಯಿಂದ ಹನಿ ನೀರಾವರಿ ಯೋಜನೆಗೆ ಸಬ್ಸಿಡಿ ಹಣ ಬಿಡುಗಡೆ ಮಾಡದೆ ರೈತರು ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಳೆದ ಎರಡು ವರ್ಷಗಳಿಂದ ರಾಜ್ಯ ತೋಟಗಾರಿಕೆ ಇಲಾಖೆ ವತಿಯಿಂದ ಹನಿ ನೀರಾವರಿ ಯೋಜನೆಗೆ ರೂ.74611.43 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.
ಆ	ಕಳೆದ ಎರಡು ವರ್ಷಗಳಲ್ಲಿ ಹನಿ ನೀರಾವರಿ ಯೋಜನೆ ಸಬ್ಸಿಡಿ ಹಣ ಬಿಡುಗಡೆ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಸಾಮಾನ್ಯ ವರ್ಗದ ರೈತರು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರ ಸಂಖ್ಯೆಯನ್ನು ಪ್ರತ್ಯೇಕವಾಗಿ ನೀಡುವುದು)	ಕಳೆದ ಎರಡು ವರ್ಷಗಳಲ್ಲಿ ಅಂದರೆ, 2019-20 ಮತ್ತು 2020-21 ರಲ್ಲಿ ಸಬ್ಸಿಡಿ ಹಣ ಬಿಡುಗಡೆ ಕೋರಿ ಒಟ್ಟು 1,09,134 ಅರ್ಜಿಗಳು ಬಂದಿರುತ್ತವೆ. ವಿವರಗಳು ಕೆಳಕಂಡಂತಿದೆ.

ವರ್ಷ	ಸಾಮಾನ್ಯ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
2019-20	41805	6649	3887	52341
2020-21	45241	7534	4018	56793
ಒಟ್ಟು	87046	14183	7905	109134

ಕ್ರ. ಸಂ.	ಪ್ರಶ್ನೆ	ಉತ್ತರ
ಇ	ಅರ್ಜಿ ಸಲ್ಲಿಸಿರುವ ರೈತರುಗಳಿಗೆ ಒಟ್ಟಾರೆಯಾಗಿ ನೀಡಬೇಕಾದ ಒಟ್ಟು ಸಬ್ಸಿಡಿ ಹಣದ ಮೊತ್ತ ಎಷ್ಟು;	ಅರ್ಜಿ ಸಲ್ಲಿಸಿರುವ ರೈತರುಗಳಿಗೆ ಒಟ್ಟಾರೆಯಾಗಿ ರೂ. 74453.18 ಲಕ್ಷಗಳ ಸಬ್ಸಿಡಿ ನೀಡಲಾಗಿರುತ್ತದೆ.
ಈ	ಯಾವ ಯಾವ ಬೆಳೆಗಳಿಗೆ ಹನಿ ನೀರಾವರಿ ಯೋಜನೆ ಸಬ್ಸಿಡಿ ಹಣ ಲಭ್ಯವಿರುತ್ತದೆ;	ಮಾವು, ಬಾಳೆ, ನಿಂಬೆ/ ಕಿತ್ತಳೆ/ ಮೂಸಂಬಿ, ಸೀಬೆ, ಸಪೋಟ ಅನಾನಸ್, ದಾಳಿಂಬೆ, ದ್ರಾಕ್ಷಿ, ಅಂಜೂರ, ಕಲ್ಲಂಗಡಿ, ಕರಬೂಜ, ಆಲೂಗೆಡ್ಡೆ, ಟೊಮೆಟೊ, ಬದನೆಕಾಯಿ, ಹುರಳಿಕಾಯಿ, ಈರುಳ್ಳಿ, ಮೆಣಸಿನಕಾಯಿ, ಗೆಡ್ಡೆಜಾತಿ, ದಪ್ಪ ಮೆಣಸಿನಕಾಯಿ, ಕುಂಬಳಜಾತಿ, ಬೆಂಡೆಕಾಯಿ, ಮೂಲಂಗಿ, ಬೀಟ್ರೂಟ್, ಕ್ಯಾರೆಟ್, ಕಾಳುಮೆಣಸು, ಏಲಕ್ಕಿ, ಹುಣಸೆ, ಶುಂಠಿ, ಅರಿಶಿಣ, ಬೆಳ್ಳುಳ್ಳಿ, ತೆಂಗು, ಅಡಿಕೆ, ಕೋಕೊ, ತಾಳೆಬೆಳೆ, ಗೋಡಂಬಿ, ಆಸ್ಟರ್, ಕನಕಾಂಬರ, ಚೆಂಡುಹೂ, ಮಲ್ಲಿಗೆ, ಸೇವಂತಿಗೆ,

		ಗ್ಲಾಡಿಯೋಲಸ್, ಗುಲಾಬಿ, ಪಪ್ಪಾಯ, ಸೀತಾಫಲ, ಬಾರೆ, ಬೆಣ್ಣೆಹಣ್ಣು, ಡ್ರ್ಯಾಗನ್‌ಫ್ರೂಟ್, ಪೇರಲ, ಹಲಸು, ಇತರೆ ಹಣ್ಣುಗಳು, ಚವಳಿ ಕಾಯಿ, ಸೌತೇಕಾಯಿ, ನುಗ್ಗೆ, ಇತರೆ ತರಕಾರಿಗಳು, ಸೊಪ್ಪಿನ ತರಕಾರಿ, ಕರಿ ಬೇವು, ಎಲೆಕೋಸು, ಹೂಕೋಸು, ಬೀನ್ಸ್, ಹೀರೆಕಾಯಿ, ಹಾಗಲಕಾಯಿ, ತಿಂಗಳಹುರಳಿ, ಸುಗಂದರಾಜ, ಗೈಲಾರ್ಡಿಯಾ, ಇತರೆ ಹೂವುಗಳು, ವಿಳ್ಯದೆಲೆ, ಇತರೆ ಔಷಧೀಯ ಬೆಳೆ, ಇತರೆ ಸಾಂಬಾರು ಪದಾರ್ಥ, ರೋಸ್ಮೆರಿ, ತುಳಸಿ, ಪುದೀನ, ನಿಂಬೆಹುಲ್ಲು, ಏಕನಾಯಕ, ಶತಾವರಿ ಮತ್ತು ಶ್ರೀಗಂಧ ಇತ್ಯಾದಿ.
ಉ	ರೈತರಿಗೆ ನೀಡಲಾಗುವ ಸಬ್ಸಿಡಿ ಹಣದ ಪ್ರಮಾಣ ಎಷ್ಟು?	ಈ ಮೇಲಿನ ಅವಧಿಯಲ್ಲಿ ಸಣ್ಣ ರೈತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮತ್ತು ಸಾಮಾನ್ಯ ರೈತರಿಗೆ 2.00 ಹೆಕ್ಟೇರ್ ವರೆಗೆ ಶೇ.90 ರಷ್ಟು ಸಹಾಯಧನವನ್ನು ಹಾಗೂ 2.00 ಹೆಕ್ಟೇರ್ ಮೇಲ್ಪಟ್ಟು 5.00 ಹೆಕ್ಟೇರ್ ವರೆಗೆ ಶೇ.45 ರಷ್ಟು ಸಹಾಯಧನ ಒದಗಿಸಲಾಗಿದೆ.

HORTI 143 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು